**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 193/2019**

**ಸಿ.ಡಬ್ಲ್ಯೂಃ-11 ಪಿ.ಡಬ್ಲ್ಯೂಃ-8**

**ದಿಃ 16.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಸೋಮಾ ರಾಜಶೇಖರ ಕೋಡಿಕೊಪ್ಪಮಠ |
| ವಯಸ್ಸು | : | 50 ವರ್ಷ. |
| ಉದ್ಯೋಗ | : | ಗ್ರಾಮ ಲೆಕ್ಕಾಧಿಕಾರಿ. |
| ವಾಸಸ್ಥಳ | : | ಇಟ್ನಾಳ |

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

1) ನಾನು ಖಳದಾಳ ಮತ್ತು ಇಟ್ನಾಳ ಗ್ರಾಮ ಪಂಚಾಯತಿಯಲ್ಲಿ ಸನ್ 2018 ನೇ ಸಾಲಿನಲ್ಲಿ ಗ್ರಾಮ ಲೆಕ್ಕಾಧಿಕಾರಿ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನು.

2) ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ತನಿಖಾಧಿಕಾರಿಗಳ ಕೋರಿಕೆಯ ಮೇರೆಗೆ, ಖಣದಾಳ ಗ್ರಾಮದ ಕಲ್ಲಪ್ಪಾ ದುಂಡಪ್ಪಾ ಗಂಜ್ಯಾಳ ಇವರ ಜಮೀನದ ಪಕ್ಕದಲ್ಲಿ ಸರ್ವೆ ನಂಃ 104/3 ನೇದ್ದು ಇರುತ್ತದೆ ಅಂತಾ ಪ್ರಮಾಣಪತ್ರ ನೀಡಿದ್ದೇನೆ. ಸಾಕ್ಷಿ ಸದರಿ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ 10 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ

10(ಎ) ಅಂತಾ ಗುರುತಿಸಲಾಯಿತು.

**ಪಾಟೀ ಸವಾಲುಃ 1ನೇ ಆರೋಪಿ ಪರಃ** ಶ್ರೀ ಎಲ್.ಬಿ.ಪಿ.ವಕೀಲರಿಂದ

1) ಸದರಿ ಜಮೀನಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯಲ್ಲಿ ಶ್ರೀಗಂಧದ ಅಥವಾ ಬೇರೆ ಯಾವುದೇ ಮರ ಸದರಿ ಜಮೀನದಲ್ಲಿದ್ದ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. ಪ್ರತಿವರ್ಷ ಜಮೀನುಗಳಿಗೆ ಬೇಟಿ ನೀಡಿ ಅಲ್ಲಿರುವ ಬೆಳೆ ಮತ್ತು ಮರಗಳ ಬಗ್ಗೆ ಪಹಣಿ ಪತ್ರಿಕೆಯಲ್ಲಿ ನಮೂದಿಸಬೇಕಾದದ್ದು ನನ್ನ ಕರ್ತವ್ಯ ಎಂದರೆ ಸರಿ. ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ಮಾಡಿರಲಿಲ್ಲ ಎಂದರೆ ಸರಿ.

2) ಶ್ರೀಗಂಧದ ಗಿಡ ಕಳುವು ಆದ ಬಗ್ಗೆ ಜಮೀನಿನ ಮಾಲೀಕರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿಲ್ಲ ಎಂದರೆ ಸರಿ. ಯಾವ ಉದ್ದೇಶಕ್ಕೆ ಪ್ರಮಾಣಪತ್ರ ತನಿಖಾಧಿಕಾರಿ ಕೇಳಿದ್ದರು ಅಂತಾ ನಾನು ವಿಚಾರ ಮಾಡಿಲ್ಲ ಎಂದರೆ ಸರಿ. ನಾನು ಯಾವುದೇ ಸ್ಥಳ ಬೇಟಿ ನೀಡದೇ ತನಿಖಾಧಿಕಾರಿಗಳ ಮಾತು ಕೇಳಿ ಕಚೇರಿಯಲ್ಲಿ ಕುಳಿತು ನಿ.ಪಿ.10 ಪ್ರಮಾಣಪತ್ರ ಬನಾವಟ ಮಾಡಿಕೊಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3ನೇ ಆರೋಪಿತ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿದ್ದು, ಆ ಪ್ರಕಾರ ಪರಿಗಣಿಸಲಾಯಿತು.

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ  ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.